ಸ್ಯ 1884ನೇ ಇಸವಿ ಜುಲೈ ತಿಂಗಳ ಕಾಲಸ್ಥಿತೀ ರಿಪೋರ್ಟುಗಳು.

ಮೈಸೂರು ಡಿಸ್ಟ್ರಿಕ್ಟು.

ಮಳೆ.—ಅತ್ತಿಕುಪ್ಪ ಮತ್ತು ಚನ್ನರಾಯಪಟ್ಣ ತಾಲ್ಲೂಕು ವಿನಾ ಯಲ್ಲ ತಾಲ್ಲೂಕುಗಳಲ್ಲೂ ಸ್ವಲ್ಪ ಮಳೆಯಾಗಿರುತ್ತೆ. ಸರಾಸರಿ 78 ಸೆಂಟಿಸ್ ಮಳೆ ಆಳೆಯಲ್ಪಟ್ಟಿತು.

ಫಸಲು.—ಕಾಲುವೆ ಆಧಾರದ ಫಸಲು ಚನ್ನಾಗಿದೆ. ಇತರ್ಜತಃ ಫಸಲು ಮಳೆ ಇಲ್ಲದೆ ಬಾಡುತ್ತಲಿವೆ. ಭತ್ತ, ರಾಗಿ, ಅವರೆ, ತಡಗಣಿ ಇವು ಕೆಲವು ಮಟ್ಟಿಗೆ ಪೇರಾವಾದವು; ಗುಂಡ್ಲುಪೇಟೆ, ತಿರುಮಕೂಡ್ಲು ನರಸೀಪುರ, ಅತ್ತಿಕುಪ್ಪ ಈ ತಾಲ್ಲೂಕುಗಳಲ್ಲಿ ಜೋಳ ಮತ್ತು ಎಳ್ಳು ಕಟೂವಾದವು.

ಜನಾರೋಗ್ಯ.—ಜನಾರೋಗ್ಯವು ಚನ್ನಾಗಿತ್ತು.

ಕಾಲ್ನಡೆ.—ಎಟ್ಟು 1,577 ಕಾಲ್ನಡೆಗಳು ಹೋದವು. ಈ ಪೈಕಿ ವಂದು ಗೋಮಾರಿ ರೋಗದಿಂದ ಗುಂಡ್ಲುಪೇಟೆಯಲ್ಲಿ ನಷ್ಟವಾದ್ದಾಗಿಯೂ ಇತರ ರೋಗಗಳಿಂದ 1,447 ಕಾಲ್ನಡೆಗಳನ್ನೂ, ಕಾಡುಮೃಗಗಳಿಂದ 129 ಕಾಲ್ನಡೆಗಳನ್ನೂ ನಷ್ಟವಾದ್ದಾಗಿ ರಿಪೋರ್ಟಾಗಿರುತ್ತೆ.

ದಾರಣೆ.—ಆಹಾರ ಜಿನಸಿಗಳ ದಾರಣೆಯು ಹೆಚ್ಚುತ್ತಲಿದೆ.

ಸರಾಸರಿ ಮಾರಾಟದ ದರವು ಇಪ್ಪರಡಿ ಕಂಡ ಪ್ರಕಾರವಿತ್ತು:—

	ರೂಪಾಯಿ 1ಕ್ಕೆ ಸೇರು.	ತೊಲ.
ಅಕ್ಕಿ, ಅವಲ್ ತರಹೇ	10	65
ಡಿಟೋ ದುಯ್ಯಂ	12	0
ರಾಗಿ	27	0
ಹುರಳಿ	25	0
ಜೇಳ್ಳೆ	11	30

ಅಬ್ದುಲ್‌ಖಾದರ್, ಕೆ. ಬಿ.,
ಡಿಪ್ಯುಟಿ ಕಮ್ಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಮಳೆ.—ಸದರೀ ಮೂಹೆಯಲ್ಲಿ ಇಪ್ಪರಡಿ ಕಂಡ ಪ್ರಕಾರ ಮಳೆಯಾಗಿರುತ್ತೆ:—

ತಾಲ್ಲೂಕು	ಅಂ.	ಸೆಂಟ್ಸ್.	ತಾಲ್ಲೂಕು.	ಅಂ.	ಸೆಂಟ್ಸ್.
ಶಿವಮೊಗ್ಗಾ	5	19	ಸೊರಬ ..	19	35
ಚನ್ನಗಿರಿ ..	1	74	ಸಾಗರ ..	10	73
ಹೊನ್ನಾಳಿ ..	1	30	ನಗರ ...	84	35
ಶಿಕಾರಿಪುರ ..	8	45	ತೀರ್ಥಹಳ್ಳಿ ..	39	95¼
			ದಾವಣಗೆರೆ ..	2	35

ಪೇರಾವಾದ ಧಾನ್ಯ.—ಸದರೀ ಮೂಹೆಯಲ್ಲಿ ಭತ್ತ, ರಾಗಿ, ಜೋಳ, ವುದ್ದು, ಹೆಸರು, ತೊಗರಿ ಯಿವುಗಳು ಬಿತ್ತಲ್ಪಟ್ಟವು. ಮೈದ್ದಾ ತಾಲ್ಲೂಕುಗಳಲ್ಲಿ ಮಳೆ ಯಿಲ್ಲದೆ ವಿಶೇಷ ತೊಂದರೆಯಾಗಿದೆ. ಸಾಗರ ತಾಲ್ಲೂಕಿನಲ್ಲಿ ಅಡಿಕೆ ಫಸಲಿಗೆ ಕೊಳೆರೋಗ ತಗಲಿದೆ.

ಕಟೂವಾದ ಫಸಲ್.—ಸದರೀ ಮೂಹೆಯಲ್ಲಿ ಯಾವ ಫಸಲೂ ಕಟೂವಾಗಲಿಲ್ಲವು.

ಜನಾರೋಗ್ಯ.—ಜನಾರೋಗ್ಯ ಚನ್ನಾಗಿಲ್ಲ, ಡಿಸ್ಟ್ರಿಕ್ಟ ಮುಳೆ ಜ್ವರ ಮತ್ತು ಕಿಡಬು ವ್ಯಾಪಿಸಿತ್ತು, ಉಖಾಲ್ ಜುಲಾಬ್ ಉಪದ್ರವದಿಂದ ದಾವಣಗೆರೆ ತಾಲ್ಲೂಕಿನಲ್ಲಿ 15 ಜನಗಳನ್ನೂ ಶಿಕಾರಿಪುರದ ತಾಲ್ಲೂ ನಲ್ಲಿ 25 ಮಂದಿಯೂ ಮೃತಪಟ್ಟಂತೆ ರಿಪೋರ್ಟಾಗಿರುತ್ತೆ.

ದಾರಣೆ.—ಯೇಕರೀತಿಯಾಗಿದೆ.

ಸೈಯದ್ ನಸಿರುದ್ದೀನ್,
ಛಾರ್ ಡಿಪ್ಯುಟಿ ಕಮ್ಮಿಷನರ್.